प्र.का., 112, जे. सी. रोड. बेंगलुरु-560 002. www.canarabank.com

**असाधारण आम बैठक (ईजीएम) वीडियो कॉन्फ्रेंसिंग (वीसी)/अन्य दृश्य-श्रव्य मोड (ओएवीएम) के माध्यम से आयोजित की जाएगी**
**[एक शेयरधारक निदेशक के चुनाव के संबंध में]**

बैंक के शेयरधारकों को एतद्वारा सूचित किया जाता है कि उपरोक्त संबंध में कॉर्पोरेट मामलों के मंत्रालय एवं भारतीय प्रतिभूति और विनिमय बोर्ड (सेबी) द्वारा जारी परिपत्रों के अनुपालन में, बैंक की असाधारण आम बैठक गुरुवार, दिनांक 25 सितंबर, 2025 को भारतीय समयानुसार पूर्वाह्न 11.00 बजे वीडियो कॉन्फ्रेंसिंग (वीसी) / अन्य दृश्य-श्रव्य मोड (ओएवीएम) से आयोजित की जाएगी, जिसमें बैठक की सूचना में निर्धारित कार्य निष्पादित किए जाएंगे।

उपरोक्त परिपत्रों के अनुपालन में, ईजीएम की सूचना की इलेक्ट्रॉनिक प्रतियां उन सभी शेयरधारकों को भेजी जाएंगी जिनके ईमेल पते बैंक/निक्षेपागार सहभागी के पास पंजीकृत हैं। जिन शेयरधारकों के शेयर डीमैट रूप में है और जिनकी ईमेल आईडी पंजीकृत नहीं है, उनसे अनुरोध है कि वे अपना ईमेल पता और मोबाइल नंबर अपने निक्षेपागार सहभागी के पास पंजीकृत कराएँ। भौतिक रूप में शेयर रखने वाले शेयरधारकों से अनुरोध है कि वे अपनी धारित शेयर को डीमैट रुप में परिवर्तित करें/अपना ईमेल पता और मोबाइल नंबर बैंक के रजिस्ट्रार और शेयर ट्रांसफर एजेंट केफिन टेक्नोलॉजीज लिमिटेड के पास **einward.ris@kfintech.com** पर उपलब्ध कराएं। ईजीएम की सूचना बैंक की वेबसाइट **www.canarabank.com**, स्टॉक एक्सचेंज की वेबसाइटों और आरटीए की वेबसाइट **https://evoting.kfintech.com** पर उपलब्ध कराई जाएगी।

शेयरधारकों को इलेक्ट्रॉनिक वोटिंग प्रणाली के माध्यम से ईजीएम की सूचना में निर्धारित कार्य पर अपने स्थान से मतदान करने का अवसर मिलेगा। अमूर्त मोड, भौतिक मोड में शेयर रखने वाले शेयरधारकों और जिन शेयरधारकों ने अपने ईमेल पते पंजीकृत नहीं कराएं हैं, उनके लिए शेयरधारकों को जारी सूचना में जानकारी दी जाएगी। इसका विवरण बैंक की वेबसाइट पर भी उपलब्ध कराया जाएगा। शेयरधारकों से अनुरोध है कि वे इस तरह की जानकारी प्राप्त करने हेतु **www.canarabank.com** का अनुसरण करें।

शेयरधारकों को एतद्वारा सूचित किया जाता है कि उपर्युक्त परिपत्रों के अनुसार, ईजीएम सूचना की भौतिक प्रति बैंक शेयरधारकों को नहीं भेजी जाएगी।

निदेशक मंडल के आदेशानुसार
कृते केनरा बैंक
कंपनी सचिव

दिनांक : 12.08.2025
स्थान : बेंगलूरु

**KEI** Wires & Cables
**केईआई इंडस्ट्रीज लिमिटेड**
(सीआइएनः L74899DL1992PLC051527)
पंजीकृत कार्यालयः डी-90, ओखला औद्योगिक क्षेत्र, फेज I, नई दिल्ली-110 020
फोनः 91-11-26818840/26818642, वेबसाइटः www.kei-ind.com
ई-मेल आईडीः cs@kei-ind.com

**सूचना**

एतद्वारा सूचना दी जाती है कि कंपनी द्वारा जारी निम्नलिखित शेयर प्रमाणपत्र के खो जाने/गुम हो गये हैं और उसके पंजीकृत शेयरधारक ने डुप्लीकेट शेयर प्रमाणपत्र/पात्रता पत्र जारी करने के लिए कंपनी/आरटीए को आवेदन किया है।

| क्र. सं. | फोलियो संख्या | प्रमाणपत्र संख्या | विशिष्ट संख्या | शेयर धारक का नाम | शेयरों की संख्या |
|---|---|---|---|---|---|
| 1 | 0000776 | 118 | 164501-165000 | गोपाल पहाड़िया | 500 |

जनता को एतद्वारा उपरोक्त शेयर प्रमाण पत्र के साथ किसी भी तरह की खरीद और व्यवहार के खिलाफ चेतावनी दी जाती है। कोई भी व्यक्ति (ओं), जिसका उक्त शेयर प्रमाणपत्र के संबंध में कंपनी के साथ कोई दावा है/हैं, को इस नोटिस के प्रकाशन के पन्द्रह दिनों के भीतर दिए गए पते पर पंजीकृत कार्यालय में दावा करना चाहिए, जिसके बाद कोई दावा मान्य नहीं होगा और कंपनी द्वारा डुप्लीकेट शेयर प्रमाणपत्र/पात्रता पत्र जारी किये जायेगें।

कृते केईआई इंडस्ट्रीज लिमिटेड
हस्ता/-
श्री किशोर कुणाल
वीपी (कॉर्पोरेट फाइनेंस) और कंपनी सचिव

स्थानः नई दिल्ली
दिनांकः 11.08.2025

**बैंक ऑफ महाराष्ट्र** Bank of Maharashtra भारत सरकार का उद्यम
*एक परिवार एक बैंक*

नोएडा जोनल कार्यालयः
बी-192/ए, ब्लॉक बी, सेक्टर 52, नोएडा
गौतमबुद्ध नगर, उत्तर प्रदेश 201301

**किराए पर परिसर चाहिए**

**बैंक ऑफ महाराष्ट्र** इसकी शाखा के लिए परिसरों के केवल ऐसे स्वामियों/पीओए होल्डर्स से ऑफर्स आमंत्रित करता है, जो व्यावसायिक गतिविधियों के लिए स्थानीय/सरकार प्राधिकरण से अनुमति के धारक हैं।

| क्र. सं. | जगह | जिला | पिनकोड जानकारी | राज्य/यूटी | शाखा की स्थिति | आवश्यक कारपेट क्षेत्र |
|---|---|---|---|---|---|---|
| 1. | सहारनपुर | सहारनपुर | 247001 | यू.पी. | शाखा स्थानांतरण | 1000-1300 वर्ग फीट |

प्रस्तावित परिसर एक अलग प्रवेश वाले एटीएम रूम सहित शाखा खोलने के लिए लीज किराया आधार पर अधिमानतः भूतल पर (पार्किंग के लिए पर्याप्त स्थान के साथ) होना चाहिए। परिसर में यथेष्ट पावर लोड तथा बैंक की आवश्यकताओं और विनिर्देशों के अनुसार अन्य इन्फ्रास्ट्रक्चर्स का प्रावधान होना चाहिए। परिसर कब्जा के लिए तैयार होना चाहिए अथवा बैंक की आवश्यकता के अनुसार 10-15 दिनों में तैयार किए जाने योग्य होना चाहिए। इच्छुक पार्टियों/व्यक्तियों को अपनी ऑफर्स क्रमानुसार "टेक्नीकल बिड" और "कॉमर्शियल बिड" के बैंक के निर्धारित फार्मेट्स में क्रमानुसार "टेक्नीकल बिड/कॉमर्शियल बिड" शीर्षांकित दो अलग सीलबंद लिफाफों में **जोनल मैनेजर, बैंक ऑफ महाराष्ट्र B 192/A, ब्लॉक B सेक्टर 52 नोएडा गौतमबुद्ध नगर, उत्तर प्रदेश- 201301** के कार्यालय में **19-08-2025 को समय 05.00** बजे तक प्रस्तुत करनी चाहिए। **कृप्या सुनिश्चित करे कि प्रस्तावित परिसर लिखित पिन कोड क्षेत्र मे ही है।** ये फार्मेट्स उपरोक्त कार्यालय से कार्य समय के दौरान व्यक्तिशः प्राप्त किए जा सकते हैं। अथवा बैंक की वेबसाइट www.bankofmaharashtra.in में "टेंडर" सेक्शन से इस विज्ञापन सहित डाउनलोड किए जा सकते हैं। बैंक बिना कोई कारण बताए किसी भी ऑफर को रद्द/अस्वीकार करने का अधिकार सुरक्षित रखता है। कोई ब्रोकरेज नहीं दिया जाएगा। अधूरे और देर से प्राप्त प्रस्तावों पर विचार नहीं किया जाएगा। अतिरिक्त विवरण के लिए हमसे gad_noi@mahabank.co.in, **मोबाइल नंबर 7351168489, 7830099442 पर सम्पर्क करें।**

दिनांकः 11.08.2025 — अंचल प्रबन्धक, बैंक ऑफ महाराष्ट्र, नोएडा जोनल

## ಬ್ರೀಫ್ ಕಾರ್ನರ್

### ಮೋದಿ-ಝೆಲೆನ್‌ಸ್ಕಿ ಮಾತುಕತೆ ಶಾಂತಿಯುತ ಪರಿಹಾರಕ್ಕೆ ಸಲಹೆ


**ಹೊಸದಿಲ್ಲಿ:** ಅಮೆರಿಕದ ಸುಂಕ ಸಮರದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸೋಮವಾರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಮಾತುಕತೆ ಸಂದರ್ಭದಲ್ಲಿ ಮೋದಿ ಅವರು ರಷ್ಯಾ ಜತೆಗಿನ ಸಂಘರ್ಷ ಅಂತ್ಯಗೊಳಿಸಲು ಶಾಂತಿಯುತ ಪರಿಹಾರ ಒದಗಿಸುವ ಸಂಬಂಧ ಉಕ್ರೇನ್‌ಗೆ ಎಲ್ಲ ರೀತಿಯ ನೆರವು ನೀಡಲು ಭಾರತ ಬದ್ಧವಾಗಿದೆ ಎಂದು ಪುನರುಚ್ಚರಿಸಿದರು. ರಷ್ಯಾದಿಂದ ತೈಲ ಆಮದು ಕಡಿಮೆ ಮಾಡಿಕೊಳ್ಳುವ ಅಗತ್ಯತೆಯನ್ನೂ ಝೆಲೆನ್‌ಸ್ಕಿ ಪ್ರತಿಪಾದಿಸಿದರು ಎನ್ನಲಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವೆ ಆಗಸ್ಟ್ 15ರಂದು ಸಭೆ ನಿಗದಿಯಾಗಿರುವ ಮಧ್ಯೆ ಉಭಯ ನಾಯಕರು ಈ ಚರ್ಚೆ ನಡೆಸಿರುವುದು ಗಮನಾರ್ಹವಾಗಿದೆ.

### ನೌಕಾಪಡೆ ಸೇರ್ಪಡೆಗೆ 'ಉದಯಗಿರಿ', 'ಹಿಮಗಿರಿ' ಯುದ್ಧ ನೌಕೆಗಳು ಸಜ್ಜು

**ವಿಶಾಖಪಟ್ಟಣಂ:** ಅತ್ಯಾಧುನಿಕ ಸ್ವದೇಶಿ ನಿರ್ಮಿತ 'ಉದಯಗಿರಿ' ಮತ್ತು 'ಹಿಮಗಿರಿ' ಯುದ್ಧ ನೌಕೆಗಳು ಆಗಸ್ಟ್ 26ರಂದು ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲು ಸಜ್ಜುಗೊಂಡಿವೆ. ಈ ಎರಡೂ ಯುದ್ಧ ನೌಕೆಗಳನ್ನು ಏಕಕಾಲಕ್ಕೆ ನೌಕಾಪಡೆಗೆ ನಿಯೋಜಿಸಲಾಗುವುದು ಎಂದು ಪೂರ್ವ ನೌಕಾ ಕಮಾಂಡ್ ತಿಳಿಸಿದೆ. 'ಉದಯಗಿರಿ' ಯುದ್ಧ ನೌಕೆಯನ್ನು ಮುಂಬಯಿನ ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದೆ. 'ಹಿಮಗಿರಿ' ಯುದ್ಧ ನೌಕೆಯನ್ನು ಕೋಲ್ಕೊತಾದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ ಸಂಸ್ಥೆ ನಿರ್ಮಿಸಿದೆ. ತಲಾ 6,700 ಟನ್ ತೂಕವಿರುವ ಈ ನೌಕೆಗಳು ಶಿವಾಲಿಕ್ ಯುದ್ಧ ನೌಕೆಗಿಂತ ಸ್ವಲ್ಪ ದೊಡ್ಡದಿವೆ. ರಡಾರ್ ಕಣ್ತಪ್ಪಿಸಿ ಶತ್ರುಗಳಿಂದ ರಕ್ಷಿಸಿಕೊಂಡು ದಾಳಿ ನಡೆಸುವ ಸಾಮರ್ಥ್ಯವನ್ನು ಹೊಂದಿವೆ. ಡೀಸೆಲ್ ಅಥವಾ ಅನಿಲ ಎರಡೂ ಇಂಧನ ಬಳಸುವ ಪ್ರೊಪೆಲರ್‌ಗಳನ್ನು ಹೊಂದಿವೆ.

### ಪತ್ನಿ ಶವ ಬೈಕ್‌ನಲ್ಲಿ ಸಾಗಿಸಿದ ಪತಿ!

**ಮುಂಬಯಿ:** ಮಾನವೀಯತೆ ಮರೆತು ಮೊಬೈಲ್‌ಅನ್ನೇ ಸರ್ವಸ್ವ ಅಂದುಕೊಂಡ ಜನರು ಸಂಕಷ್ಟಕ್ಕೆ ಸಿಲುಕಿರುವವರಿಗೆ ನೆರವಾಗದೇ ವಿಡಿಯೊ ಮಾಡುವ ಪ್ರಕರಣಗಳು ಹೆಚ್ಚುತ್ತಲೇ ಇವೆ. ಇದೂ ಅಂತಹುದೇ ಒಂದು ಘಟನೆ. ಮಹಾರಾಷ್ಟ್ರದ ನಾಗ್ಪುರದಲ್ಲಿ ವೇಗವಾಗಿ ಬಂದ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ 35 ವರ್ಷದ ಅಮಿತ್ ಯಾದವ್ ತಮ್ಮ ಪತ್ನಿ ಗ್ಯಾಸಿರ್ ಅವರನ್ನು ಕಳೆದುಕೊಂಡಿದ್ದಾರೆ. ದಂಪತಿ



ಮಧ್ಯಪ್ರದೇಶದ ಕರಣ್‌ಪುರಕ್ಕೆ ಪ್ರಯಾಣಿಸುತ್ತಿದ್ದಾಗ ಅಪಘಾತ ಸಂಭವಿಸಿದೆ. ರಸ್ತೆಗೆ ಬಿದ್ದ ಗ್ಯಾಸಿರ್ ಅವರ ಮೇಲೆ ಲಾರಿ ಹರಿದಿದ್ದರಿಂದ ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆದರೆ, ಲಾರಿ ಚಾಲಕ ನಿಲ್ಲಿಸದೇ ಪರಾರಿಯಾಗಿದ್ದಾನೆ. ಆಕೆಯನ್ನು ಆಸ್ಪತ್ರೆಗೆ ಸಾಗಿಸಲು ಪತಿ ಪರಿಪರಿಯಾಗಿ ಬೇಡಿಕೊಂಡರೂ ದಾರಿಹೋಕರು ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿದರೇ ಹೊರತು ಸಹಾಯಕ್ಕೆ ಮಾತ್ರ ಯಾರೂ ಮುಂದಾಗಿಲ್ಲ. ಪತ್ನಿ ಕೊನೆಯುಸಿರೆಳೆದಿರುವುದು ದೃಢಪಟ್ಟಿದ್ದರಿಂದ ಅಮಿತ್ ಮೃತದೇಹವನ್ನು ಬೈಕ್‌ಗೆ ಕಟ್ಟಿಕೊಂಡು ಮಧ್ಯಪ್ರದೇಶದ ತಮ್ಮ ಗ್ರಾಮಕ್ಕೆ ತೆಗೆದುಕೊಂಡು ಹೋಗಲು ಮುಂದಾದರು. ದಾರಿಯಲ್ಲಿ ತಡೆದ ಪೊಲೀಸರು ಶವವನ್ನು ನಾಗ್ಪುರದ ಇಂದಿರಾಗಾಂಧಿ ವೈದ್ಯಕೀಯ ಕಾಲೇಜಿಗೆ ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

### ಭಾರತೀಯ ರಾಜತಾಂತ್ರಿಕ ಸಿಬ್ಬಂದಿಗೆ ಕಿರುಕುಳ ನೀಡಿದ ಪಾಕ್

**ಹೊಸದಿಲ್ಲಿ:** 'ಆಪರೇಷನ್ ಸಿಂದೂರ' ಕಾರ್ಯಾಚರಣೆ ವೇಳೆ ಸೋತು ಶರಣಾದ ಹತಾಶೆಯಲ್ಲಿ ಭಾರತೀಯ ರಾಯಭಾರ ಸಿಬ್ಬಂದಿಗೆ ಪಾಕಿಸ್ತಾನ ಸರಕಾರ ಕಿರುಕುಳ ನೀಡಿರುವುದು ಬಹಿರಂಗವಾಗಿದೆ. ಭಾರತದ ಸೇನಾಪಡೆಗಳ ಬಲವಾದ ಪ್ರಹಾರದಿಂದ ಸೇನಾ ನೆಲೆಗಳನ್ನು ಕಳೆದುಕೊಂಡಿದ್ದ ಪಾಕಿಸ್ತಾನ ಇಸ್ಲಾಮಾಬಾದ್‌ನಲ್ಲಿದ್ದ ಭಾರತೀಯ ಹೈಕಮಿಷನ್ ಕಚೇರಿ, ಅಧಿಕಾರಿಗಳ ಮನೆಗಳಿಗೆ ಸರಬರಾಜಾಗುತ್ತಿದ್ದ ದಿನಪತ್ರಿಕೆ ಪೂರೈಕೆ ಸೇರಿದಂತೆ ದೈನಂದಿನ ವಸ್ತುಗಳ ಪೂರೈಕೆ ನಿಲ್ಲಿಸಿತ್ತು ಎಂದು ಸರಕಾರದ ಮೂಲಗಳು ತಿಳಿಸಿವೆ. ವಿಯೆನ್ನಾ ಒಪ್ಪಂದ ಉಲ್ಲಂಘಿಸಿ ರಾಜತಾಂತ್ರಿಕ ಸಿಬ್ಬಂದಿಯ ಗೌರವ ಹಾಗೂ ಘನತೆಗೆ ಕುಂದು ಉಂಟುಮಾಡಿತ್ತು ಎಂಬ ಸಂಗತಿ ಬಹಿರಂಗ ವಾಗಿದೆ. ಪಾಕಿಸ್ತಾನದ ಕುತಂತ್ರ ಬುದ್ಧಿಗೆ ತಿರುಗೇಟು ನೀಡಿದ್ದ ಭಾರತ ಸಹ ದಿಲ್ಲಿಯಲ್ಲಿದ್ದ ಪಾಕ್ ರಾಜತಾಂತ್ರಿಕ ಸಿಬ್ಬಂದಿಗಳಿಗೂ ಅದೇ ರೀತಿಯ ಶಿಕ್ಷೆ ವಿಧಿಸಿತ್ತು. ದಿನಪತ್ರಿಕೆ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಯನ್ನು ಕೆಲ ದಿನಗಳ ಕಾಲ ತಡೆ ಹಿಡಿದಿತ್ತು ಎನ್ನಲಾಗಿದೆ.

# ಪಾಕ್ ಸೇನಾ ಮುಖ್ಯಸ್ಥನ ಹುಚ್ಚಾಟ

## ಅಮೆರಿಕದ ನೆಲದಲ್ಲಿ ನಿಂತು ಅಣುಬಾಂಬ್ ದಾಳಿ ಬೆದರಿಕೆ | ಅರ್ಧ ಪ್ರಪಂಚವನ್ನೇ ಉಡಾಯಿಸುತ್ತೇವೆಂದ ಮುನೀರ್ | ಉದ್ಧಟತನದ ಹೇಳಿಕೆ ಎಂದು ಭಾರತ ತಿರುಗೇಟು

**ವಾಷಿಂಗ್ಟನ್/ಹೊಸದಿಲ್ಲಿ:** 'ಆಪರೇಷನ್ ಸಿಂದೂರ' ವೇಳೆ ಏಟು ತಿಂದು ಬಾಲ ಸುಟ್ಟ ಬೆಕ್ಕಿನಂತಾಗಿದ್ದ ಪಾಕಿಸ್ತಾನ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಮತ್ತೆ ಭಾರತದ ವಿರುದ್ಧ ಮತ್ತೆ ವಿಷ ಕಾರಿದ್ದಾರೆ.

ಅಮೆರಿಕ ನೆಲದಲ್ಲಿ ನಿಂತು ಪರಮಾಣು ಬಾಂಬ್ ದಾಳಿ ಬೆದರಿಕೆ ಹಾಕಿದ್ದು, ದೇಶದ ಅಸ್ತಿತ್ವ ಉಳಿಸಿಕೊಳ್ಳಲು ಅಗತ್ಯ ಬಿದ್ದರೆ ಅರ್ಧ ಪ್ರಪಂಚದ ಮೇಲೆ ಅಣು ಬಾಂಬ್ ಹಾಕುವ ಮೂಲಕ ನಾಶಪಡಿಸುತ್ತೇವೆ ಎಂದು ಗೊಡ್ಡು ಬೆದರಿಕೆ ಹಾಕಿದ್ದಾರೆ. ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಭಾರತವು, "ಇಂಥ ಗೊಡ್ಡು ಬೆದರಿಕೆಗಳಿಗೆ ಭಾರತ ಎಂದಿಗೂ ಹೆದರುವುದಿಲ್ಲ. ಆಪರೇಷನ್ ಸಿಂದೂರ ವೇಳೆ ಏನಾಗಿದೆ ಎಂಬುದು ನೆನಪಿರಲಿ," ಎಂದು ತಿರುಗೇಟು ನೀಡಿದೆ.

ಉಗ್ರರ ವಿರುದ್ಧ ಭಾರತದ ಕೈಗೊಂಡಿದ್ದ ಪ್ರತೀಕಾರದ ಕ್ರಮದ ಬಳಿಕ ಎರಡನೇ ಬಾರಿಗೆ ಅಮೆರಿಕಗೆ ಭೇಟಿ ನೀಡಿರುವ ಪಾಕ್ ಸೇನಾ ಮುಖ್ಯಸ್ಥ ಮುನೀರ್, "ನಮ್ಮದು ಪರಮಾಣು ಬಾಂಬ್‌ಗಳನ್ನು ಹೊಂದಿದ ದೇಶ. ನಮ್ಮ ದೇಶಕ್ಕೆ ಅಪಾಯ ಎದುರಾಗುತ್ತಿದೆ ಎಂಬ ಭಾವನೆ ಮೂಡಿದಲ್ಲಿ ಅರ್ಧದಷ್ಟು ಪ್ರಪಂಚವನ್ನು ಆಪೋಷನ ತೆಗೆದುಕೊಳ್ಳುತ್ತೇವೆ," ಎಂದು ನಾಲಗೆ ಹರಿಬಿಟ್ಟಿದ್ದಾರೆ. ಮೂರನೇ (ಅಮೆರಿಕ) ರಾಷ್ಟ್ರದ ನೆಲದಲ್ಲಿ ನಿಂತು ಮತ್ತೊಂದು ದೇಶದ ವಿರುದ್ಧ ಒಂದು ದೇಶದ ಸೇನಾ ಮುಖ್ಯಸ್ಥರು ಅಣು ಬಾಂಬ್ ಬೆದರಿಕೆ ಹಾಕಿರುವುದು ಜಾಗತಿಕ ಮಟ್ಟದಲ್ಲಿ ಮೊದಲು ಎನ್ನಲಾಗಿದೆ. ಮುನೀರ್ ಬೆದರಿಕೆ ವಿಚಾರ ವಿಶ್ವಮಟ್ಟದಲ್ಲಿ ವ್ಯಾಪಕ ಚರ್ಚೆಗೀಡಾಗಿದೆ. ಜಾಗತಿಕ ಮಟ್ಟದಲ್ಲಿ ಕಳವಳ ಹುಟ್ಟುಹಾಕಿದೆ.



**ಭಾರತ ವಿಶ್ವನಾಯಕ ಅಲ್ಲ:** ಭಾರತದ ವಿರುದ್ಧ ದ್ವೇಷದ ಮಾತು ಮುಂದುವರಿಸಿದ ಮುನೀರ್, "ನಮ್ಮ ದೇಶ ಕಚ್ಚಾ ರಸ್ತೆಯಲ್ಲಿ ಚಲಿಸುವ ಟ್ರಕ್ ಇದ್ದಂತೆ. ಭಾರತ ಹೈವೇಯಲ್ಲಿ ಬರುವ ಮರ್ಸಿಡೆಸ್ ಕಾರಿನಂತಿದೆ. ನಮ್ಮ ಟ್ರಕ್ ಡಿಕ್ಕಿ ಹೊಡೆದರೆ ಕಾರು ಮೂರು ಪಲ್ಟಿಯಾಗಲಿದೆ. ನೀವೇ ಯೋಚಿಸಿ ಯಾರು ಗೆಲ್ಲುತ್ತಾರೆ," ಎಂದು ಸ್ವಯಂ ಬೆನ್ನು ತಟ್ಟಿಕೊಂಡಿದ್ದಾರೆ. "ಭಾರತ ವಿಶ್ವನಾಯಕನಾಗಲು ಸಾಧ್ಯವಿಲ್ಲ. ಆ ಸ್ಥಾನದ ಸನಿಹಕ್ಕೂ ಹೋಗಲು ಆಗುವುದಿಲ್ಲ," ಎಂದು ಹೇಳಿದ ಮುನೀರ್, "ಸಿಖ್ ಜನರ ಮೂಲಕ ಕೆನಡಾ, ನೌಕಾ ಅಧಿಕಾರಿಗಳ ಮೂಲಕ ಕತಾರ್, ಕುಲಭೂಷಣ್ ಜಾಧವ್ ಮೂಲಕ ಪಾಕಿಸ್ತಾನದಲ್ಲಿ ಉಗ್ರ ಕೃತ್ಯ ನಡೆಸಿರುವುದಕ್ಕೆ ನಮ್ಮ ಬಳಿ ಪುರಾವೆಗಳಿವೆ," ಎಂದು ಬೊಗಳೆ ಬಿಟ್ಟಿದ್ದಾರೆ.

### ಡ್ಯಾಮ್ ಉಡಾಯಿಸುತ್ತೇವೆ

"ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನೆಪ ಮಾಡಿಕೊಂಡು ಭಾರತ ಸಿಂಧು ಜಲ ಒಪ್ಪಂದ ಅಮಾನತುಗೊಳಿಸಿದೆ. ನದಿ ನೀರು ಹರಿವು ತಡೆಯಲೆತ್ನಿಸಿದೆ. ನಮ್ಮ ಪಾಲಿನ ನೀರು ತಡೆಯಲು ಭಾರತ ಜಲಾಶಯ ನಿರ್ಮಾಣ ಮಾಡಿದರೆ ಕ್ಷಿಪಣಿಗಳ ಮೂಲಕ ಕ್ಷಣಾರ್ಧದಲ್ಲಿ ಉಡಾಯಿಸುತ್ತೇವೆ," ಎಂದಿರುವ ಮುನೀರ್, "ಸಿಂಧು ನದಿಗಳು ಭಾರತೀಯರಿಗೆ ಸೇರಿದ ನದಿಗಳಲ್ಲ. ನಮ್ಮ ಪಾಲಿನ ಜೀವನಾಡಿಗಳು. ನಮ್ಮ ಜೀವಕ್ಕೆ ಕುತ್ತು ಬರುವುದು ಕಂಡು ಬಂದರೆ ಯಾವುದೇ ಅಣೆಕಟ್ಟೆಗಳನ್ನು ನಾಶಪಡಿಸುತ್ತೇವೆ," ಎಂದು ಬೆದರಿಕೆ ಹಾಕಿದ್ದಾರೆ.

### ಮುನೀರ್ ಫುಲ್ ಟ್ರೋಲ್

ಪಾಕಿಸ್ತಾನವನ್ನು ಡಂಪ್ ಟ್ರಕ್, ಭಾರತವನ್ನು ಮರ್ಸಿಡಿಸ್ ಕಾರಿಗೆ ಹೋಲಿಸಿದ ಮುನೀರ್ ಅವರನ್ನು ಸಾಮಾಜಿಕ ಜಾಲತಾಣದಲ್ಲಿ ನೆಟ್ಟಿಗರು ಫುಲ್ ಟ್ರೋಲ್ ಮಾಡಿದ್ದಾರೆ. ಮೀಮ್ಸ್, ವ್ಯಂಗ್ಯದ ಚಿತ್ರಗಳ ಮೂಲಕ ಮುನೀರ್ ಕಾಲೆಳೆಯಲಾಗಿದೆ. "ಸ್ವಯಂ ಕೀರ್ತಿಗೆ ದೇಶದ ಮರ್ಯಾದೆಯನ್ನು ಜಾಗತಿಕ ಮಟ್ಟದಲ್ಲಿ ಹರಾಜಾಕಿದ್ದೀರಿ," ಎಂದು ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಲೇವಡಿ ಮಾಡಿದ್ದಾರೆ. ಎಐ ಮೂಲಕ ರೂಪಿಸಲಾದ ಡಂಪ್ ಟ್ರಕ್ ಅಪಘಾತಕ್ಕೀಡಾದ ಚಿತ್ರಗಳನ್ನು ಪೋಸ್ಟ್ ಮಾಡುವ ಮೂಲಕ ಸದ್ಯ ಪಾಕಿಸ್ತಾನದ ಸ್ಥಿತಿ ಇದಾಗಿದೆ ಎಂಬಂತೆ ಕೆಲವರು ಅಪಹಾಸ್ಯ ಮಾಡಿದ್ದಾರೆ.

### ಬ್ಲ್ಯಾಕ್‌ಮೇಲ್‌ಗೆ ಬೆದರಲ್ಲ

ಮುನೀರ್ ಬೆದರಿಕೆಗೆ ತಿರುಗೇಟು ನೀಡಿರುವ ವಿದೇಶಾಂಗ ವ್ಯವಹಾರಗಳ ಇಲಾಖೆ, "ಪರಮಾಣು ಬಾಂಬ್ ಬ್ಲ್ಯಾಕ್ ಮೇಲ್‌ಗಳಿಗೆ ಭಾರತ ಬೆದರುವುದಿಲ್ಲ. ದೇಶದ ಭದ್ರತೆಗೆ ಯಾವುದೇ ಕ್ರಮ ತೆಗೆದು ಕೊಳ್ಳಲು ನಾವು ಶಕ್ತವಾಗಿದ್ದೇವೆ," ಎಂದು ಪ್ರತ್ಯುತ್ತರ ನೀಡಿದೆ. "ಮತ್ತೊಂದು ದೇಶದ ಬಗ್ಗೆ ಮೂರನೇ ರಾಷ್ಟ್ರದ ನೆಲದಲ್ಲಿ ನಿಂತು ಪರಮಾಣು ಬಾಂಬ್ ಬೆದರಿಕೆ ಹಾಕಿರುವುದು ಪಾಕಿಸ್ತಾನದ ಉದ್ಧಟತನವಾಗಿದೆ. ಜಗತ್ತು ಇಂತಹ ಬೆದರಿಕೆ ವಿಚಾರಗಳನ್ನು ಖಂಡಿಸಬೇಕು," ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆಗ್ರಹಿಸಿದೆ.

# ಮತಗಳ್ಳತನ, ಎಸ್‌ಐಆರ್ ವಿರುದ್ಧ ಪ್ರತಿಪಕ್ಷಗಳ ಸಮರ

## ದಿಲ್ಲಿಯಲ್ಲಿ ಐಎನ್‌ಡಿಐಎ ಸಂಸದರಿಂದ ಪ್ರತಿಭಟನೆ





**ಹೊಸದಿಲ್ಲಿ:** ಕಳೆದ ಲೋಕಸಭೆ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಮತಗಳ್ಳತನ ಆರೋಪ, ಬಿಹಾರ ಮತಪಟ್ಟಿ ಪರಿಷ್ಕರಣೆ ವಿರೋಧಿಸಿ ಸೋಮವಾರ ದಿಲ್ಲಿಯಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಪಕ್ಷಗಳ ಸಂಸದರು ಸಂಸತ್‌ನಿಂದ ಚುನಾವಣಾ ಆಯೋಗದ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಾರ್ಗಮಧ್ಯೆ ಪ್ರತಿಭಟನಾ ನಿರತ ಸಂಸದರನ್ನು ತಡೆದ ಪೊಲೀಸರು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಿಯಾಂಕಾ ವಾದ್ರಾ, ಪಿ.ಚಿದಂಬರಂ, ಶಿವಸೇನೆಯ ಸಂಜಯ್ ರಾವತ್, ಆಪ್‌ನ ಸಂಜಯ್ ಸಿಂಗ್ ಸೇರಿದಂತೆ ಹಲವು ಸಂಸದರನ್ನು ವಶಕ್ಕೆ ತೆಗೆದುಕೊಂಡು, ನಂತರ ಬಿಡುಗಡೆ ಮಾಡಿದರು.

**ರಸ್ತೆಯಲ್ಲೇ ಹೈಡ್ರಾಮಾ:** ಸಂಸತ್ ಭವನ ಮಾರ್ಗದ ಪಿಟಿಐ ಕಟ್ಟಡ ಬಳಿ ಬ್ಯಾರಿಕೇಡ್ ಹಾಕಿದ್ದ ಪೊಲೀಸರು ಪ್ರತಿಪಕ್ಷಗಳ ಮೆರವಣಿಗೆ ತಡೆದರು. "30 ಜನರಿಗೆ ಮಾತ್ರ ಅವಕಾಶ ಇದೆ. ನಿರ್ದಿಷ್ಟ ಪ್ರತಿನಿಧಿಗಳನ್ನು ಹೊರತು ಪಡಿಸಿ ಉಳಿದವರು ಹಿಂದಕ್ಕೆ ತೆರಳಿ," ಎಂದು ಪೊಲೀಸರು ಲೌಡ್‌ಸ್ಪೀಕರ್ ಮೂಲಕ ಘೋಷಿಸಿದರು. ಸೂಚನೆ ಧಿಕ್ಕರಿಸಿ ಮೆರವಣಿಗೆ ಮುಂದುವರಿಸಿದ ಸಂಸದರನ್ನು ಪೊಲೀಸರು ತಡೆದರು.

**ಖರ್ಗೆ, ರಾಹುಲ್ ಸೇರಿ ಹಲವರ ವಶ, ನಂತರ ಬಿಡುಗಡೆ**

ಈ ವೇಳೆ ಪೊಲೀಸರು ಹಾಗೂ ಸಂಸದರ ನಡುವೆ ದೊಡ್ಡ ಹೈಡ್ರಾಮಾ ನಡೆಯಿತು. ಟಿಎಂಸಿ ಸಂಸದರಾದ ಮೊಹುವಾ ಮೊಯಿತ್ರಾ, ಸಾಗರಿಕಾ ಘೋಷ್, ಸುಶ್ಮಿತಾ ದೇವ್, ಕಾಂಗ್ರೆಸ್‌ನ ಜ್ಯೋತಿಮಣಿ ಮೊದಲಾದವರು ಬ್ಯಾರಿಕೇಡ್ ಹಾರಿ ಒಳಹೋಗಲು ಯತ್ನಿಸಿದರು. ಬಹುಸಂಖ್ಯೆಯಲ್ಲಿದ್ದ ಪೊಲೀಸರು ಬ್ಯಾರಿಕೇಡ್ ಹಾರುವ ಸಂಸದರ ಯತ್ನವನ್ನು ವಿಫಲಗೊಳಿಸಿದರು. ಮತ್ತೊಂದೆಡೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಬ್ಯಾರಿಕೇಡ್ ಹಾರಿ ಸರಕಾರ ಹಾಗೂ ಆಯೋಗದ ವಿರುದ್ಧ ಘೋಷಣೆ ಕೂಗಿದರು. ಕೂಡಲೇ ಎಲ್ಲರನ್ನು ವಶಕ್ಕೆ ತೆಗೆದುಕೊಂಡ ಪೊಲೀಸರು, ಬಸ್‌ನಲ್ಲಿ ಕರೆದುಕೊಂಡು ಹೋದರು.

**ಘೋಷಣಾಪತ್ರ ಸಲ್ಲಿಸಲ್ಲ:** "ನಮ್ಮ ಹೋರಾಟ ಪ್ರತಿಯೊಬ್ಬ ಭಾರತೀಯರಿಗೆ ಮತದಾನದ ಹಕ್ಕು ನೀಡುವುದಾಗಿದೆ. ಮತಗಳ್ಳತನ ಒಂದು ಕ್ಷೇತ್ರಕ್ಕೆ ಸಂಬಂಧಿಸಿದ್ದಲ್ಲ, ಇಡೀ ದೇಶಕ್ಕೆ ಸಂಬಂಧಿಸಿದ ವಿಷಯವಾಗಿದೆ. ಸ್ವಚ್ಛ ಹಾಗೂ ಶುದ್ಧ ಮತಪಟ್ಟಿ ರೂಪಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ," ಎಂದು ರಾಹುಲ್ ಗಾಂಧಿ ಹೇಳಿದರು.

"ಚುನಾವಣಾ ಆಯೋಗ ಕೇಳಿದ ಸಹಿಯುಳ್ಳ ಘೋಷಣಾಪತ್ರ ಸಲ್ಲಿಸುವುದಿಲ್ಲ," ಎಂದು ಸ್ಪಷ್ಟಪಡಿಸಿದ ರಾಹುಲ್, "ಮತಗಳ್ಳತನದ ಬಗ್ಗೆ ನಾವು ಬಹಿರಂಗ ಪಡಿಸಿರುವ ದತ್ತಾಂಶಗಳು ಆಯೋಗದ ವೆಬ್‌ಸೈಟ್ ನಿಂದ ತೆಗೆದುಕೊಳ್ಳಲಾಗಿದೆ. ಬೇಕಿದ್ದರೆ ಆಯೋಗ ಪರಿಶೀಲನೆ ಮಾಡಿಕೊಳ್ಳಲಿ. ನನ್ನ ಘೋಷಣೆಯ ಸಹಿ ಏಕೆ ಬೇಕು?," ಎಂದು ಪ್ರಶ್ನಿಸಿದರು.

> ಚುನಾವಣಾ ಆಯೋಗದ ಮತಗಳ್ಳತನ, ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ಧೋರಣೆ ಬಯಲು ಮಾಡುವುದು ಪ್ರತಿಪಕ್ಷಗಳ ಪ್ರತಿಭಟನೆಯ ಉದ್ದೇಶ. ಜನರ ಹಕ್ಕು ರಕ್ಷಿಸಲು ನಿರಂತರ ಹೋರಾಟ ನಡೆಸಲಾಗುವುದು.
> – **ಮಲ್ಲಿಕಾರ್ಜುನ ಖರ್ಗೆ** ಎಐಸಿಸಿ ಅಧ್ಯಕ್ಷ

> ಮತಗಳ್ಳತನದ ಬಗ್ಗೆ ರಾಹುಲ್ ಗಾಂಧಿ ಎತ್ತಿರುವ ಪ್ರಶ್ನೆಗಳಿಗೆ ಚುನಾವಣಾ ಆಯೋಗ ಉತ್ತರ ನೀಡಬೇಕು. ಆರೋಪ ಮಾಡಿದವರಿಂದ ಅಫಿಡವಿಟ್ ಕೇಳುವುದು ದಿಕ್ಕು ತಪ್ಪಿಸುವ ಪ್ರಯತ್ನವಷ್ಟೆ.
> –**ಶಶಿ ತರೂರ್** ಕಾಂಗ್ರೆಸ್ ಸಂಸದ

### ಚುನಾವಣಾ ನಿಯಮ ಹೇಳುವುದೇನು?

ಚುನಾವಣೆಗೆ ಸಂಬಂಧಿಸಿದ ಯಾವುದೇ ರೀತಿಯ ಸುಳ್ಳು ಮಾಹಿತಿ ನೀಡುವುದು ಪ್ರಜಾಪ್ರತಿನಿಧಿ ಕಾಯಿದೆ-1951ರ ಅಡಿಯಲ್ಲಿ ಅಪರಾಧವಾಗಿದೆ. ಸಾರ್ವಜನಿಕವಾಗಿ ಪ್ರಕಟಿಸಿದ ಮಾಹಿತಿ ಸುಳ್ಳಾಗಿದ್ದಲ್ಲಿ ಆರೋಪ ಮಾಡಿದ ವ್ಯಕ್ತಿಗೆ ಆರ್‌ಪಿಎ (ಪ್ರಜಾಪ್ರತಿನಿಧಿ ಕಾಯಿದೆ-1951) ಸೆಕ್ಷನ್ 31 ಅಡಿಯಲ್ಲಿ ಒಂದು ವರ್ಷದ ಶಿಕ್ಷೆ ಅಥವಾ ದಂಡ ಅಥವಾ ಎರಡನ್ನು ವಿಧಿಸುವ ಅವಕಾಶವಿದೆ. ಬಿಎನ್‌ಎಸ್ ಕಾಯಿದೆಯ ಸೆಕ್ಷನ್ 227ರ ಅಡಿಯಲ್ಲಿ ಸುಳ್ಳು ಮಾಹಿತಿಗೆ ಏಳು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬಹುದಾಗಿದೆ. ಸುಳ್ಳು ಸಾಕ್ಷ್ಯ ಸಲ್ಲಿಸಿದಲ್ಲಿ ಮೂರು ವರ್ಷ ಹೆಚ್ಚುವರಿ ಶಿಕ್ಷೆ ವಿಧಿಸುವ ಅವಕಾಶವೂ ಇದೆ.

## ಪಾಕ್‌ನಲ್ಲಿ ಸೇನಾ ದಂಗೆಗೆ ಬೆಂಬಲ ನೀಡುತ್ತಾ ಅಮೆರಿಕ?

**ಹೊಸದಿಲ್ಲಿ:** ಪಾಕಿಸ್ತಾನದ ಸೇನಾ ಮುಖ್ಯಸ್ಥರಿಗೆ ಕೆಂಪು ಹಾಸಿನ ಸ್ವಾಗತ ಕೋರುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ನೀತಿ ಭವಿಷ್ಯದಲ್ಲಿ ಪಾಕ್‌ನಲ್ಲಿ ಸೇನಾ ದಂಗೆಗೆ ಮುನ್ನುಡಿಯಾಗಬಹುದು ಎಂದು ಹೇಳಲಾಗಿದೆ.

ತಿಂಗಳ ಅಂತರದಲ್ಲಿ ಎರಡು ಬಾರಿ ಸೇನಾ ಮುಖ್ಯಸ್ಥ ಆಸಿಮ್ ಮುನೀರ್‌ಗೆ ಅದ್ದೂರಿ ಸ್ವಾಗತ ಕೋರಿರುವ ಅಮೆರಿಕ ನೀತಿ ಪಾಕಿಸ್ತಾನದಲ್ಲಿ ಕ್ಷಿಪ್ರ ಸೇನಾ ಕ್ರಾಂತಿಗೆ ಅಡಿಪಾಯ ಹಾಕುತ್ತಿದೆ. ಪಾಕಿಸ್ತಾನದ ಸರಕಾರದ ಮೇಲೆ ಮುನೀರ್ ಆಧಿಪತ್ಯ ಸ್ಥಾಪಿಸಲು ಪರೋಕ್ಷ ಬೆಂಬಲ ನೀಡುತ್ತಿದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ. ಒಂದು ವೇಳೆ ಸೇನಾ ದಂಗೆಯಾದರೆ ಫೀಲ್ಡ್ ಮಾರ್ಷಲ್ ಆಗಿರುವ ಮುನೀರ್, ಆಡಳಿತಾರೂಢ ಸರಕಾರವನ್ನು ವಜಾಗೊಳಿಸಿ ಅಧ್ಯಕ್ಷರಾಗಲಿದ್ದಾರೆ ಎಂದು ಹೇಳಲಾಗಿದೆ.

**ಬಲೂಚ್ ಆರ್ಮಿ ಉಗ್ರ ಸಂಘಟನೆ**

ಮುನೀರ್ ಅಮೆರಿಕ ಪ್ರವಾಸದ ವೇಳೆಯೇ ಬಲೂಚಿಸ್ತಾನ್ ಲಿಬರೇಷನ್ ಆರ್ಮಿಯನ್ನು ಟ್ರಂಪ್ ಆಡಳಿತ ಉಗ್ರ ಸಂಘಟನೆ ಪಟ್ಟಿಗೆ ಸೇರಿಸಿದೆ.

## 'ದುರಂತ ಸನಿಹದಲ್ಲಿ ಪಾರಾದೆವು'

**ಹೊಸದಿಲ್ಲಿ:** "ಕೇರಳದ ತಿರುವನಂತಪುರದಿಂದ ಹೊಸದಿಲ್ಲಿಗೆ ಭಾನುವಾರ ಸಂಜೆ ತೆರಳುತ್ತಿದ್ದ ಏರ್ ಇಂಡಿಯಾದ ಎಐ 2455 ಸಂಖ್ಯೆಯ ವಿಮಾನವು ದುರಂತಕ್ಕೀಡಾಗುವುದು ಸ್ವಲ್ಪದರಲ್ಲೇ ತಪ್ಪಿದೆ. ಈ ವಿಮಾನದಲ್ಲಿ ನಾನೂ ಸೇರಿದಂತೆ ಕೆಲ ಸಂಸದರು ಪಯಣಿಸುತ್ತಿದ್ದೆವು. ನಿಜಕ್ಕೂ ಇದೊಂದು ಭಯಾನಕ ಪಯಣವಾಗಿತ್ತು," ಎಂದು ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.



ಈ ಬಗ್ಗೆ ಡಿಜಿಸಿಎ ಸ್ಪಷ್ಟನೆ ನೀಡಿದ್ದು, ವಿಮಾನದಲ್ಲಿದ್ದ ಹವಾಮಾನ ಸೂಚನೆ ರಡಾರ್‌ನಲ್ಲಿ ಸಮಸ್ಯೆಯ ಶಂಕೆ ಕಾಣಿಸಿಕೊಂಡಿದ್ದರಿಂದ ಕೊನೆ ಕ್ಷಣದಲ್ಲಿ ವಿಮಾನವನ್ನು ಚೆನ್ನೈಗೆ ಮಾರ್ಗ ಬದಲಿಸಲಾಗಿತ್ತು ಎಂದು ಹೇಳಿದೆ. ಪೈಲಟ್ ಮೊದಲ ಬಾರಿ ಲ್ಯಾಂಡಿಂಗ್‌ಗೆ ಪ್ರಯತ್ನಿಸಿದ ವೇಳೆ ರನ್‌ವೇನಲ್ಲಿ ಮತ್ತೊಂದು ವಿಮಾನವಿತ್ತು ಎಂಬ ವೇಣುಗೋಪಾಲ್ ಆರೋಪವನ್ನು ಏರ್ ಇಂಡಿಯಾ ನಿರಾಕರಿಸಿದೆ.


"ನಾವಿದ್ದ ವಿಮಾನವು ತಡವಾಗಿ ತಿರುವನಂತಪುರದಿಂದ ಪಯಣ ಆರಂಭಿಸಿತು. ಟೇಕಾಫ್ ಆದ ಕೆಲವೇ ಹೊತ್ತಿನಲ್ಲಿ ವಿಮಾನವು ಓಲಾಡತೊಡಗಿತು. ಸುಮಾರು ಒಂದು ಗಂಟೆ ನಂತರ ಪೈಲಟ್, ವಿಮಾನದ ಸಿಗ್ನಲ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು, ಚೆನ್ನೈಗೆ ಮಾರ್ಗ ಬದಲಿಸಲಾಗುತ್ತಿದೆ ಎಂದು ಘೋಷಿಸಿದರು. ನಂತರ ಎರಡು ಗಂಟೆ ವಿಮಾನವು ವಿಮಾನ ನಿಲ್ದಾಣದಲ್ಲಿ ಸುತ್ತುತ್ತಲೇ ಇತ್ತು. ಕೊನೆಗೆ ಲ್ಯಾಂಡ್ ಮಾಡಲು ಅನುಮತಿ ಸಿಕ್ಕಿತು. ಮೊದಲ ಬಾರಿ ಲ್ಯಾಡಿಂಗ್ ಪ್ರಯತ್ನಿಸಿದಾಗ ಅದೇ ರನ್‌ವೇನಲ್ಲಿ ಮತ್ತೊಂದು ವಿಮಾನವಿತ್ತು. ತಕ್ಷಣವೇ ಪೈಲಟ್ ಮತ್ತೆ ವಿಮಾನವನ್ನು ಮೇಲಕ್ಕೆ ಹಾರಿಸಿದರು. ಹೀಗಾಗಿ ನಮ್ಮೆಲ್ಲರ ಜೀವ ಉಳಿಯಿತು," ಎಂದು ಎಕ್ಸ್‌ನಲ್ಲಿ ಅನುಭವ ಹಂಚಿಕೊಂಡಿದ್ದರು.

# ಬೀದಿ ನಾಯಿಗಳನ್ನು ಶೆಡ್‌ಗೆ ಹಾಕಿ

## ದಿಲ್ಲಿ ಸರಕಾರ, ಪಾಲಿಕೆಗೆ ಸುಪ್ರೀಂ ಆದೇಶ

**ಹೊಸದಿಲ್ಲಿ:** ರಾಷ್ಟ್ರ ರಾಜಧಾನಿ ಪ್ರದೇಶದ ವಸತಿ ಸಮುಚ್ಚಯ ಪ್ರದೇಶಗಳಿಂದ ಎಲ್ಲಾ ಬೀದಿ ನಾಯಿಗಳನ್ನು ಹೊರವಲಯದ ಆಶ್ರಯ ತಾಣಗಳಿಗೆ ಶಾಶ್ವತವಾಗಿ ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ದಿಲ್ಲಿಯನ್ನು ಬೀದಿ ನಾಯಿ ಹಾವಳಿಯಿಂದ ಮುಕ್ತಗೊಳಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳುವಂತೆ ದಿಲ್ಲಿ ಸರಕಾರ, ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದೆ.

ಹೆಚ್ಚುತ್ತಿರುವ ಬೀದಿ ನಾಯಿಗಳ ದಾಳಿ ಘಟನೆಗಳ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಜೆ.ಬಿ.ಪರ್ದಿವಾಲಾ ಹಾಗೂ ನ್ಯಾ.ಆರ್. ಮಹಾದೇವನ್ ಅವರಿದ್ದ ಪೀಠ, "ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಿದರೆ ಸಾಲದು, ಬೀದಿ ನಾಯಿಗಳನ್ನು ದಿಲ್ಲಿಯ ಎಲ್ಲಾ ಜನವಸತಿ ಪ್ರದೇಶಗಳಿಂದ ಬೇರೆಡೆಗೆ ಸ್ಥಳಾಂತರಿಸಬೇಕು ಹೊರವಲಯದಲ್ಲಿ ಶಾಶ್ವತವಾಗಿ ಆಶ್ರಯತಾಣ ಸ್ಥಾಪಿಸಿ ಅಲ್ಲಿಗೆ ಎಲ್ಲಾ ನಾಯಿಗಳನ್ನು ಸಾಗಿಸಬೇಕು. ಈ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವಂತಿಲ್ಲ. ಬೇರೆಯವರ ಮಧ್ಯ ಪ್ರವೇಶ, ಪ್ರಾಣಿ ದಯಾ ಸಂಘಗಳ ಹಿತವಚನ ಕೇಳುವ ಅಗತ್ಯವಿಲ್ಲ," ಎಂದು ಖಡಕ್ ಸೂಚನೆ ನೀಡಿದೆ.



ದಿಲ್ಲಿಯಲ್ಲಿ ನಾಯಿ ಕಡಿತ ಹಾಗೂ ರೇಬೀಸ್‌ನಿಂದ ಹೆಚ್ಚುತ್ತಿರುವ ಸಾವಿನ ಪ್ರಕರಣಗಳ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನ ಮಹತ್ವದ ಆದೇಶ ನೀಡಿದೆ. ಕಳೆದ ಕೆಲವು ತಿಂಗಳಿಂದ ಹೆಚ್ಚಿದ್ದ ಬೀದಿ ನಾಯಿಗಳ ಕಾಟದಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಗಾಯಗೊಂಡಿದ್ದರು. ಕೆಲವು ಘಟನೆಗಳನ್ನು ಬೀದಿ ನಾಯಿಗಳ ದಾಳಿಗೊಳಗಾದವರು ಮೃತಪಟ್ಟಿದ್ದರು.

**ನಿಯಮ ಮರೆತುಬಿಡಿ:** ದಿಲ್ಲಿ ಸರಕಾರದ ಪರವಾಗಿ ಹಾಜರಾದ ಸಾಲಿಸಿಟರ್‌ಜನರಲ್ ತುಷಾರ್ ಮೆಹ್ತಾ, "ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಒಂದು ಸ್ಥಳವನ್ನು ಗುರುತಿಸಲಾಗಿದೆ. ಆದರೆ, ಪ್ರಾಣಿ ಹಕ್ಕುಗಳ ಕಾರ್ಯಕರ್ತರು ತಡೆಯಾಜ್ಞೆಯಿಂದ ಯೋಜನೆ ಸ್ಥಗಿತಗೊಂಡಿದೆ," ಎಂಬ ಸಂಗತಿಯನ್ನು ನ್ಯಾಯಪೀಠದ ಗಮನಕ್ಕೆ ತಂದರು.

## ಏರ್ ಇಂಡಿಯಾ ಪೈಲಟ್ ನಿವೃತ್ತಿ ವಯಸ್ಸು 58ರಿಂದ 65ಕ್ಕೆ ಏರಿಕೆ

**ಹೊಸದಿಲ್ಲಿ:** ನಾಗರಿಕ ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ಸಂಸ್ಥೆಯು ಪೈಲಟ್‌ಗಳ ನಿವೃತ್ತಿ ವಯಸ್ಸನ್ನು 58ರಿಂದ 65 ವರ್ಷಗಳಿಗೆ ಏರಿಸಿದೆ. ಹಾಗೆಯೇ ಉಳಿದ ಸಿಬ್ಬಂದಿಯ ನಿವೃತ್ತಿ ವಯಸ್ಸನ್ನು 58ರಿಂದ 60ಕ್ಕೆ ಹೆಚ್ಚಿಸಿದೆ.

ಏರ್ ಇಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ಅವರು ಸಂಸ್ಥೆಯ ಟೌನ್‌ಹಾಲ್ ಸಭೆಯಲ್ಲಿ ಈ ವಿಷಯ ಪ್ರಕಟಿಸಿದರು. ಈಗಾಗಲೇ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು ವಾಣಿಜ್ಯ ಪೈಲಟ್‌ಗಳಿಗೆ ಗರಿಷ್ಠ 65 ವರ್ಷದವರೆಗೂ ವಿಮಾನ ಹಾರಾಟ ನಡೆಸಲು ಅನುಮತಿ ನೀಡಿದೆ. ಏರ್ ಇಂಡಿಯಾದಲ್ಲಿ 24 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳಿದ್ದು, ಇದರಲ್ಲಿ 3,600 ಪೈಲಟ್‌ಗಳು ಸೇರಿದ್ದಾರೆ. 9,500 ಕ್ಯಾಬಿನ್ ಸಿಬ್ಬಂದಿ ಇದ್ದಾರೆ. ಕ್ಯಾಬಿನ್ ಸಿಬ್ಬಂದಿಯ ನಿವೃತ್ತಿ ವಯಸ್ಸನ್ನೂ ಪೈಲಟ್‌ಗಳಿಗೆ ಸಮಾನವಾಗಿ 65 ವರ್ಷಕ್ಕೆ ಹೆಚ್ಚಿಸಲಾಗಿದೆಯೇ ಎಂಬುದು ಖಚಿತಪಟ್ಟಿಲ್ಲ.

## ಸಮಾಧಿ ಬಳಿ ಪ್ರಾರ್ಥನೆಗೆ ಹಿಂದೂಗಳ ಮನವಿ

**ಕಾನ್ಪುರ:** ಉತ್ತರ ಪ್ರದೇಶದ ಫತೇಪುರ ಜಿಲ್ಲೆಯ ಸಮಾಧಿಯೊಂದರ ಎದುರು ಪ್ರಾರ್ಥನೆ ಸಲ್ಲಿಸಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿ ಹಿಂದೂ ಸಂಘಟನೆಗಳ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು. "ಆ ಸ್ಥಳದಲ್ಲಿ ಹಿಂದೆ ದೇವಸ್ಥಾನವಿತ್ತು," ಎಂದು ಪ್ರತಿಭಟನಾಕಾರರು ಆರೋಪಿಸಿದರು. ಶತಮಾನಗಳಷ್ಟು ಹಳೆಯದಾದ ಇಲ್ಲಿನ ನವಾಬ್ ಅಬು ಸಮದ್ ಅವರ ಸಮಾಧಿ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸುವುದಾಗಿ ಬಿಜೆಪಿ ಜಿಲ್ಲಾಧ್ಯಕ್ಷ ಮುಖ್‌ಲಾಲ್ ಪಾಲ್ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿ, "ಇಲ್ಲಿ ಶತಮಾನಗಳಷ್ಟು ಹಳೆಯದಾದ 'ಶಿವಲಿಂಗ' ಹೊಂದಿರುವ ದೇವಾಲಯವಿದೆ," ಎಂದು ಹೇಳಿದರು.

## ಇಸ್ರೇಲ್ ದಾಳಿಗೆ ಪತ್ರಕರ್ತ ಸೇರಿ ಆರು ಮಂದಿ ಸಾವು

**ಜೆರುಸಲೇಂ:** ಇಸ್ರೇಲ್ ಸೇನೆಯು ಭಾನುವಾರ ಗಾಜಾ ನಗರದ ಮೇಲೆ ನಡೆಸಿದ ದಾಳಿಗೆ ಸಿಟಿ ಆಸ್ಪತ್ರೆ ಸಂಕೀರ್ಣದ ಹೊರಗೆ ಆಶ್ರಯ ಪಡೆದಿದ್ದ ಅಲ್ ಜಜೀರಾ ವರದಿಗಾರ, ಮತ್ತೊಬ್ಬ ಪತ್ರಕರ್ತ ಸೇರಿ ಆರು ಮಂದಿ ಮೃತಪಟ್ಟಿದ್ದಾರೆ.

"ದಾಳಿಯಲ್ಲಿ ಮೃತಪಟ್ಟವರಲ್ಲಿ ಅಲ್‌ಜಜೀರಾ ವರದಿಗಾರರಾದ ಅನಾಸ್ ಅಲ್ ಷರೀಫ್ ಮತ್ತು ಮೊಹಮ್ಮದ್ ಖುರೈಕಾ ಸೇರಿದ್ದಾರೆ. ಅಲ್ಲದೇ ನಾಲ್ವರು ಪತ್ರಕರ್ತರು ಮತ್ತು ಇಬ್ಬರು ಸಾರ್ವಜನಿಕರು ಮೃತಪಟ್ಟಿದ್ದಾರೆ," ಎಂದು ಶಿಫಾ ಆಸ್ಪತ್ರೆಯ ಆಡಳಿತ ನಿರ್ದೇಶಕ ರಾಮಿ ಮೋಹನ್ನಾ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. "ದಾಳಿಯ ವೇಳೆ ಆಸ್ಪತ್ರೆ ಸಂಕೀರ್ಣದ ತುರ್ತು ಕಟ್ಟಡದ ಪ್ರವೇಶದ್ವಾರಕ್ಕೂ ಹಾನಿ ಉಂಟು ಮಾಡಿದೆ," ಎಂದು ಶಿಫಾ ಆಸ್ಪತ್ರೆಯ ಅಧಿಕಾರಿಗಳು ಹೇಳಿದ್ದಾರೆ.

ಇಸ್ರೇಲ್ ಸೇನೆಯು, "ಮೃತ ಅನಾಸ್ ಅಲ್ ಷರೀಫ್ ಅವರು ಹಮಾಸ್ ಘಟಕದ ನಾಯಕ," ಎಂದು ಹೇಳಿದ್ದು, ಯುದ್ಧದ ಸಮಯದಲ್ಲಿ ಅವರ ಸಾವಿನ ಹೊಣೆಯನ್ನು ಮೊದಲ ಬಾರಿಗೆ ಅದು ಒಪ್ಪಿಕೊಂಡಿದೆ.

ಈ ಹಿಂದೆ ಇಸ್ರೇಲಿ ಸೇನಾ ಅಧಿಕಾರಿಗಳು ಅನಾಸ್ ಅಲ್ ಷರೀಫ್ ಮತ್ತು ಇತರ ಅಲ್ ಜಜೀರಾ ಪತ್ರಕರ್ತರನ್ನು ಹಮಾಸ್ ಮತ್ತು ಇಸ್ಲಾಮಿಕ್ ಜಿಹಾದ್ ಉಗ್ರಗಾಮಿ ಗುಂಪುಗಳ ಸದಸ್ಯರು ಎಂದು ಆರೋಪಿಸಿತ್ತು.

ಕೆನರಾ ಬ್ಯಾಂಕ್ ಭಾರತ ಸರ್ಕಾರದ ಒಂದು ಉದ್ಯಮ | Canara Bank A Government of India Undertaking | ಸಿಂಡಿಕೇಟ್ Syndicate
ಪ್ರಧಾನ ಕಛೇರಿ, 112, ಜೆ.ಸಿ. ರಸ್ತೆ, ಬೆಂಗಳೂರು – 560002 www.canarabank.com

**ವೀಡಿಯೋ ಕಾನ್ಫರೆನ್ಸಿಂಗ್ (ವಿಸಿ) / ಇತರ ದೃಶ್ಯ-ಶ್ರವಣ ವಿಧಾನದ (ಓಎವಿಎಂ) ಮೂಲಕ ನಡೆಯುವ ಅಸಾಧಾರಣ ಸಾಮಾನ್ಯ ಸಭೆ (ಇಜಿಎಂ) (ಒಬ್ಬರು ಷೇರುದಾರ ನಿರ್ದೇಶಕರ ಚುನಾವಣೆಗೆ ಸಂಬಂಧಿಸಿದಂತೆ)**

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ಷೇರು ಮತ್ತು ವಿನಿಮಯ ಮಂಡಳಿ (SEBI) ಯಿಂದ ನೀಡಲಾದ ಸುತ್ತೋಲೆಗಳಿಗೆ ಅನುಸಾರವಾಗಿ, ಸಭೆಯ ಪ್ರಕಟಣೆಯಲ್ಲಿ ಪ್ರಸ್ತುತಪಡಿಸಿದ ಉದ್ದೇಶಕ್ಕಾಗಿ ಬ್ಯಾಂಕ್‌ನ ಒಂದು ಅಸಾಧಾರಣ ಸಾಮಾನ್ಯ ಸಭೆಯನ್ನು ಗುರುವಾರ, 25ನೇ ಸೆಪ್ಟೆಂಬರ್ 2025 ರಂದು ಭಾರತೀಯ ಕಾಲಮಾನ ಬೆಳಿಗ್ಗೆ 11.00 ಗಂಟೆಗೆ ವೀಡಿಯೋ ಕಾನ್ಫರೆನ್ಸಿಂಗ್ (ವಿಸಿ) / ಇತರ ದೃಶ್ಯ-ಶ್ರವಣ ವಿಧಾನದ (ಓಎವಿಎಂ) ಮೂಲಕ ನಡೆಸಲಾಗುತ್ತದೆ ಎಂದು ಬ್ಯಾಂಕ್‌ನ ಷೇರುದಾರರು ಗಮನಿಸಬಹುದು.

ಮೇಲ್ಕಾಣಿಸಿದ ಸುತ್ತೋಲೆಗಳಿಗೆ ಅನುಸಾರವಾಗಿ, ಇಜಿಎಂ ಪ್ರಕಟಣೆಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಬ್ಯಾಂಕ್ / ಠೇವಣಿ ಭಾಗವಹಿಸುವವರೊಂದಿಗೆ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿದ ಎಲ್ಲಾ ಷೇರುದಾರರಿಗೆ ಕಳುಹಿಸಲಾಗುತ್ತದೆ. ಡಿಮೆಟಿರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಮತ್ತು ಅವರ ಇ-ಮೇಲ್ ಐಡಿಗಳನ್ನು ನೋಂದಾಯಿಸದವರು ತಮ್ಮ ಇ-ಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಠೇವಣಿ ಭಾಗವಹಿಸುವವರ ಮೂಲಕ ತಮ್ಮ ಸಂಬಂಧಿತ ಠೇವಣಿಗಳೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಹಿಡುವಳಿಗಳನ್ನು ಡಿಮ್ಯಾಟ್ ಮಾಡಲು / ತಮ್ಮ ಇ-ಮೇಲ್ ವಿಳಾಸಗಳನ್ನು ಮತ್ತು ಮೊಬೈಲ್ ಸಂಖ್ಯೆಯನ್ನು ಕೆ-ಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಬ್ಯಾಂಕ್‌ನ ರಿಜಿಸ್ಟ್ರಾರ್ ಮತ್ತು ಷೇರ್ ಟ್ರಾನ್ಸ್‌ಫರ್ ಏಜೆಂಟ್‌ನೊಂದಿಗೆ einward.ris@kfintech.com. ನಲ್ಲಿ ಒದಗಿಸುವಂತೆ ವಿನಂತಿಸಲಾಗಿದೆ. ಇಜಿಎಂನ ಪ್ರಕಟಣೆಯು ಬ್ಯಾಂಕ್‌ನ ಜಾಲತಾಣ, www.canarabank.com, ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣಗಳು ಮತ್ತು ಆರ್‌ಟಿಎ ಜಾಲತಾಣ https://evoting.kfintech.com ದಲ್ಲಿ ಲಭ್ಯವಾಗುತ್ತದೆ.

ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯ ಮೂಲಕ ಇಜಿಎಂನ ಪ್ರಕಟಣೆಯಲ್ಲಿ ಸೂಚಿಸಿದಂತೆ ಷೇರುದಾರರು ತಮ್ಮ ಮತವನ್ನು ಸಂಪರ್ಕ ರಹಿತವಾಗಿ ಚಲಾಯಿಸಲು ಅವಕಾಶವನ್ನು ಹೊಂದಿರುತ್ತಾರೆ. ಡಿಮೆಟಿರಿಯಲೈಸ್ಡ್ ರೂಪದಲ್ಲಿ, ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಮತ್ತು ಇ-ಮೇಲ್ ವಿಳಾಸವನ್ನು ನೋಂದಾಯಿಸದ ಷೇರುದಾರರಿಗೆ ಸಂಪರ್ಕ ರಹಿತವಾಗಿ ಮತ ಚಲಾಯಿಸುವ ವಿಧಾನವನ್ನು ಷೇರುದಾರರ ಪ್ರಕಟಣೆಯಲ್ಲಿ ಒದಗಿಸಲಾಗುತ್ತದೆ. ವಿವರಗಳನ್ನು ಬ್ಯಾಂಕ್‌ನ ಜಾಲತಾಣದಲ್ಲಿಯೂ ಲಭ್ಯಗೊಳಿಸಲಾಗುವುದು. ಅಂತಹ ವಿವರಗಳನ್ನು ಪಡೆಯಲು ಷೇರುದಾರರು www.canarabank.com ಗೆ ಭೇಟಿ ನೀಡುವಂತೆ ಕೋರಲಾಗಿದೆ.

ಮೇಲ್ಕಾಣಿಸಿದ ಸುತ್ತೋಲೆಗಳ ನಿಬಂಧನೆಗಳಂತೆ, ಷೇರುದಾರರಿಗೆ ಇಜಿಎಂ ಪ್ರಕಟಣೆಯ ಭೌತಿಕ ಪ್ರತಿಯನ್ನು ಬ್ಯಾಂಕ್ ಕಳುಹಿಸುವುದಿಲ್ಲವೆಂಬುದನ್ನು ಷೇರುದಾರರು ಗಮನಿಸಬೇಕು.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
ದಿನಾಂಕ : 12.08.2025 ಕೆನರಾ ಬ್ಯಾಂಕ್ ಪರವಾಗಿ
ಸ್ಥಳ : ಬೆಂಗಳೂರು ಕಂಪನಿ ಕಾರ್ಯದರ್ಶಿ

ಸಮಗ್ರ ಶಿಕ್ಷಣ ಕರ್ನಾಟಕ
**ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ**
ಸಮಗ್ರ ಶಿಕ್ಷಣ ಕರ್ನಾಟಕ ಕೊಠಡಿ ಸಂಖ್ಯೆ ಸಿ11 & ಸಿ12, ನೆಲಮಹಡಿ, ನೂತನ ಜಿಲ್ಲಾಡಳಿತ ಭವನ ಯಕ್ಲಾಸ್‌ಪುರ, ರಾಯಚೂರು–584104
ಸಂಖ್ಯೆ:ಎ2/ಸಶಿಕರಾ/kgbv ಹಾಪೂ ಟೆಂಡರ್ ಪ್ರ/2025–26 ದಿನಾಂಕ:06.08.2025

**ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2025–26ನೇ ಸಾಲಿಗೆ ಜಿಲ್ಲೆಯ 05 ಕೆಜಿಬಿವಿ ವಸತಿ ನಿಲಯಗಳಿಗೆ, ಆಹಾರ ಸಿದ್ದಪಡಿಸಿ ಪೂರೈಕೆಗೆ ಅಲ್ಪಾವಧಿಯ ಇ–ಟೆಂಡರ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ, ಇಚ್ಛೆಯುಳ್ಳವರು http://www.kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರನಲ್ಲಿ ಭಾಗವಹಿಸಲು ಕೋರಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22.08.2025. ಟೆಂಡರಿನ ಮೊತ್ತ:– 05 ಕೆಜಿಬಿವಿ ವಸತಿ ನಿಲಯಗಳಿಗೆ ರೂ. 85,00,000/–

ಸಹಿ/– ಉಪನಿರ್ದೇಶಕರು(ಆ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ ರಾಯಚೂರು
DIP/RCR/320/KSMC&A/321/2025-26

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್, ಕ.ನೀ.ನಿ.ನಿ. ರವರ ಕಛೇರಿ,ಕೆ.ಪಿ.ಸಿ. ವಿಭಾಗ ನಂ–1 ಬೀದರ
No.EE/KNNL/KPC/Dn-1/BDR/PB/TND/2025-26/632 Dated:07.08.2025

**:: "ಇ"ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ::**

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆಯ 4701 ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಬರುವ ವಿಪತ್ತು ನಿರ್ವಹಣೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ "ಇ"ಪ್ರೊಕ್ಯೂರಮೆಂಟ್‌ನಲ್ಲಿ ಶೇಕಡವಾರು ದ್ವಿ–ಲಕೋಟೆಯ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿರುತ್ತವೆ. ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಕಾಮಗಾರಿಗೆ (ಇಂಡೆಂಟ್ 3012/Call-2) ಟೆಂಡರಿಗಿಟ್ಟ ಮೊತ್ತವು **ರೂ:50,88,895.42,**(ಐವತ್ತು ಲಕ್ಷದ ಎಂಬತ್ತೆಂಟು ಸಾವಿರದ ಎಂಟು ನೂರಾ ತೊಂಬತ್ತೈದು ರೂಪಾಯಿ ಮತ್ತು ನಾಲ್ಕು ಎರಡು ಪೈಸೆ) ಇದ್ದು ಹಾಗೂ ಇ.ಎಮ್.ಡಿ. ಮೊತ್ತವು **ರೂ: 60,000/–**(ಅರವತ್ತು ಸಾವಿರ ಮಾತ್ರ) ಇದ್ದು, ಕೆಲಸದ ಅವಧಿ ಮಳೆಗಾಲ ಸೇರಿ 4 ತಿಂಗಳು ಇರುತ್ತದೆ. 1)" ಇ" ಪ್ರೊಕ್ಯೂರಮೆಂಟ್‌ನಲ್ಲಿ htpps://kppp.karnataka.gov.in ಖಾಲಿ ಟೆಂಡರ ಫಾರ್ಮಗೆ ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ–ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ **ದಿನಾಂಕ: 07–08–2025 ರಿಂದ 16–08–2025 ರ 16.00 ಘಂಟೆಯವರೆಗೆ.** 2) **ದಿನಾಂಕ: 18–08–2025 ರಂದು 11.30 ಘಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು.** 3) **ದಿನಾಂಕ 19–08–2025 ರಂದು 17.30 ಘಂಟೆಯ** ನಂತರ ಅಥವಾ ತಾಂತ್ರಿಕ ಬಿಡ್ಡ ಅನುಮೋದನೆಗೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಕನೀನಿನಿ, ಕೆ.ಪಿ.ಸಿ.ವಿಭಾಗ ನಂ.1, ಬೀದರ.
ವಾ.ಸಾ.ಸಂ.ಇ/ಬೀದರ/131/ಕೆ.ಎಸ್.ಎಂ.ಸಿ.&ಎ/2025–26

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾದಾಮಿ**
ಬನಶಂಕರಿ ರೋಡ, ಬದಾಮಿ – 587201. ದೂ.: 220142, 220042,
ಸಂಖ್ಯೆ : ಕೃ.ಉ.ಮಾ.ಸ./ಬ./ಅಭಿಕೆ/315/2025–26 ದಿನಾಂಕ : 08–08–2025

**ಇ-ಪೋರ್ಟಲ್ ಟೆಂಡರ್ ಪ್ರಕಟಣೆ**

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ | ಇ.ಎಂ.ಡಿ. (ರೂ. ಗಳಲ್ಲಿ) |
|---|---|---|---|
| 01 | ಬದಾಮಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕೆರೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 80 ಮೆ.ಟನ್. ಸಾಮರ್ಥ್ಯದ ವಿದ್ಯುನ್ಮಾನ ಯಂತ್ರ ನಿರ್ಮಾಣ ಕಾಮಗಾರಿ. Tender Number: APMC/2025-26/OW/WORK_INDENT627 | 53,20,244=00 (ಜಿ.ಎಸ್.ಟಿ. ಪ್ರತ್ಯೇಕ) | 1,06,500=00 |

ಮೇಲಿನಂತೆ ಅಭಿವೃದ್ಧಿ ಕಾಮಗಾರಿಯನ್ನು ಇ–ಪೋರ್ಟಲ್ (E-Portal) ಮೂಲಕ ಟೆಂಡರ್ ಹೊರಡಿಸಲಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ **ಕೊನೆಯ ದಿನಾಂಕ : 06–09–2025 ರ ಸಂಜೆ 5.30 ಗಂಟೆಗೆ ನಿಗಧಿಪಡಿಸಿದ್ದು.**
**ಹೆಚ್ಚಿನ ಮಾಹಿತಿಯನ್ನು ಕಛೇರಿ ಹಾಗೂ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.**

ಸಹಿ/– ಕಾರ್ಯದರ್ಶಿ, ಕೃ.ಉ.ಮಾ. ಸಮಿತಿ, ಬದಾಮಿ.
ಸಹಿ/– ಅಧ್ಯಕ್ಷರು, ಕೃ.ಉ.ಮಾ. ಸಮಿತಿ, ಬದಾಮಿ.
ಡಿಐಪಿಆರ್/ಬಾಗಲಕೋಟೆ/216/ಮಣಿಪಾಲ್/2025–26

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**ಇಂಜಿನಿಯರಿಂಗ್ ಘಟಕ**
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023.
ದೂ: 080–29557023, ಇ–ಮೇಲ್: cekhsdrp@gmail.com
ಸಂ: ಆಕುಕ/ಇಂಘ/ಮು.ಇಂ/ತಾ.ಸ–1/ಸ.ಇಂ–3/ ಟಿಎನ್‌ಡಿ–2/2025–26/1589 ದಿನಾಂಕ: 08.08.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ**

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ **(KPPP)** ಮೂಲಕ ಆಹ್ವಾನಿಸಲಾಗಿದೆ.

**ಕಾಮಗಾರಿಯ ವಿವರ:** ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು ಮತ್ತು ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಆಲೂರ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಘಟಕ ನಿರ್ಮಾಣ ಕಾಮಗಾರಿ (2ನೇ ಕರೆ). ಟೆಂಡರಿಗಿಟ್ಟ ಅಂದಾಜು ಮೊತ್ತ: **ರೂ. 200.00 ಲಕ್ಷಗಳು.** ಇಎಂಡಿ: **ರೂ. 3.00 ಲಕ್ಷಗಳು.** ಕಾಲಾವಧಿ (ಮಳೆಗಾಲ ಸೇರಿದಂತೆ): **6 ತಿಂಗಳು.**

**ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **20.08.2025 ರಂದು 16.00 ಗಂಟೆಯವರೆಗೆ. (2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **21.08.2025 ರಂದು 16.30 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) **https://kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **https://kppp.karnataka.gov.in** ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (KPPP) ನೋಂದಾಯಿಸಿಕೊಳ್ಳಬೇಕಾಗಿರುತ್ತದೆ.

**ಟಿಪ್ಪಣಿ: (1)** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **(2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು